ಓ ಎಸ್ ನಂಃ 83/17 ಪಿ ಡಬ್ಲ್ಯೂ-1

ದಿಃ 22-07-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ವಾದಿ 1 (ಡಿ) ಮುಖ್ಯ ವಿಚಾರಣೆ ಃಶ್ರೀ ಬಿ ಎಸ್ ನ್ಯಾಯವಾದಿಗಳಿಂದಃ

ನಾನು ನನ್ನ ಮುಖ್ಯ ವಿಚಾರಣೆಗೆ ಅನುಗುಣವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ. ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ದಾವ ಸ್ವತ್ತಿಗೆ ಸಂಬಂಧಿಸಿದ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯು ದಾವ ಸ್ವತ್ತಿನ ಒಂದು ಎಂ ಆರ್ ವಹಿ ಮತ್ತು ಎರಡು ಋಣಭಾರ ರಾಹಿತ್ಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ 2 ರಿಂದ 4 ಎಂದು, ದಾವ ಸ್ವತ್ತಿಗೆ ಸಂಬಂಧಿಸಿದ ಒಂದು ಗಣಕೀಕೃತ ಪಹಣಿ ಮತ್ತು ಒಂದು ಎಂ ಆರ್ ವಹಿಯನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ 5 ಮತ್ತು 6 ಎಂದು , ಭೂಹಿಡುವಳಿ ಪ್ರಮಾಣ ಪತ್ರದ ಒಂದು ದಾಖಲೆಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ 7 ಎಂದು, ಭೂದಾಖಲೆಗಳ ಸಹಾಯಕ ನಿರ್ದೇಶಕರು ಹರಪನಹಳ್ಳಿ ಉಪವಿಭಾಗ ಇವರು ನೀಡಿದ ಆದೇಶದ ದೃಡೀಕೃತ ನಕಲನನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ 8 ಎಂದು, ಕಂದಾಯ ಇಲಾಖೆಯವರು ನೀಡಿದ ನೋಟಿಸ್, ರಿ ಸರ್ವೆ ನಂ. 59 ರ ಬಾಬ್ತು ಸ್ಥಳ ತನಿಖೆ ನಕ್ಷೆ , ಅಂಚೆ ಸ್ವೀಕೃತಿ , ರಶೀದಿ ಮತ್ತು ಸಾಕ್ಷಿಯ ತಂದೆ ಖಜಾ ಹುಸೇನ್ ರವರು ಡಿಡಿ ಎಲ್ ಆರ್ ರವರ ನೀಡಿದ ಒಂದು ಅರ್ಜಿಯನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ 9 ರಿಂದ 13 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು